

## ಕೊನೆಯ ಸುತ್ತು

ಬಾಳಿನ ಯಾನ
ಮುಗಿಯುವ ಮುನ್ನ
ಹಾಕಿ ಕೊನೆಯ ಸುತ್ತು
ಒಂದು ನಮನ.

ಅಂದು ಸಂಗಾತಿಯ
ಜೊತೆಗೊಂದು ಸಪ್ತಪದಿ
ಈಗ ಮತ್ತದೇ ಹಾದಿಯಲಿ
ಕೊನೆಯ ಸುತ್ತು
ಕೂಡುತಿದೆ ಜೀವ ನದಿ.

ಕನಸುಗಳ ಮಾರಣಹೋಮ
ಬಾಳೆಲ್ಲ ಚೆಲ್ಲಾಪಿಲ್ಲಿ. ಮನುಜನ
ಲೆಕ್ಕಕೆ ಸಿಗದ ಆ ಶಕ್ತಿಯ ಚಕ್ರಕೆ
ಕೊನೆಯ ಸುತ್ತು ಹಾಕಿ
ಸೋತು ಹೋಗುತಿದೆ ಬದುಕು.

ಇನ್ನೆಷ್ಟು ಜೀವಗಳ ಬಲಿಯೋ
ಮತ್ತೆಷ್ಟು ತುಂಬಲಾರದ ನಷ್ಟವೋ
ಯಾರೋ ಮಾಡಿದ ತಪ್ಪಿಗೆ
ಕೊನೆಯ ಸುತ್ತು ಹಾಕಿ
ಕಳೆಯುತ್ತಿದೆ ಅಮಾಯಕ ಪ್ರಾಣ.

**ನಿವೇದಿತಾ ತದಾನಿ**

## ನಿಗೂಢ ಯಾತ್ರೆ

ನಿಗೂಢ ಜಗದ
ಕಲ್ಪನೆಯ ತೋರುವ ಚಿತ್ರ ರೂಪ.
ವಿಶ್ವದ ಹುಟ್ಟು ತೋರುತಿಹ
ಹಿಗ್ಗುತಲೇ ಸಾಗುತಿಹ
ಅನಂತದೆಡೆ ಪಯಣಿಸುವ
ನಿಂತಲ್ಲೇ ನಿಂತಿರುವ ಅದಕೆ
ಎಲ್ಲೆ ಎಂಬುದೇ ಇಲ್ಲ.
ಆದಿಯೂ ಅಂತ್ಯವೂ
ಇಲ್ಲದೆ ಸಾಗುತಿದೆ
ಬ್ರಹ್ಮಾಂಡ ಯಾತ್ರೆ.

ಶೂನ್ಯವ ಸಾರುತಿದೆ
ವಿಸ್ತಾರಗೊಳ್ಳುತಿಹ
ವೃತ್ತಗಳ ರೂಪ.

ಅದರ ಅಂತರಾಳವ
ತಿಳಿಯ ಹೊರಟಿಹ ಮನುಜನ
ಎರಡು ಪಾದಗಳ ನಾಲ್ಕು ಹೆಜ್ಜೆಗಳು
ವ್ಯರ್ಥ ಈ ದಿವ್ಯ ಯಾನಕೆ.

**ಎನ್. ಶಂಕರ್**

## ಪಯಣ

ಎಲ್ಲೋ ಹೊರಟು ನಿಂತಿವೆ ಹೆಜ್ಜೆಗಳು.
ಕಾಲಗರ್ಭದ ನೀರಲಿ ಮಿಂದು
ನೋವು, ನಲಿವಿನ ಬುತ್ತಿಯನುಂಡು
ದೇಶ–ಕಾಲಗಳ ಸುತ್ತಿ
ಅದೆಷ್ಟೋ ಚಡಾವು ಸವೆಸಿ

ಕತ್ತಲಲ್ಲಿ ಕಂಗೆಟ್ಟು ಕಮರಿದ
ದೀನ, ದುರ್ಬಲರ ಎದೆಗಳಲ್ಲಿ
ಹೊಸಬೆಳಕಿನ ಅಕ್ಷರವ ಬಿತ್ತಿ
ಕೋಟಿ ಕಣ್ಣುಗಳಿಗೆ ಜೀವತುಂಬಿ
ಮುತ್ತು ರತ್ನಗಳ ಹೆಕ್ಕುತ

ವರ್ತಮಾನದ ಜೊತೆಜೊತೆಯಲಿ
ಗೆಜ್ಜೆಕಟ್ಟಿ ಕುಣಿದು ಸಾಗುತ
ಹೊರಟು ನಿಂತಿದೆ ಪಯಣ
ಮನ್ವಂತರಕ್ಕೆ ಹಾಕಿ ಲಗ್ಗೆ

**ನಲ್ಲೂರು ಚಲಪತಿ**